ಒಪ್ಪಿಸಬೌದಿತ್ತು. ಅವನ ಮನೆ ಹತ್ರ ಹೋಗಿ ಕರಕೊಂಡು ಬರಲೇ ಅನ್ನಿಸಿತಾದರೂ ಊರ ಜನಕ್ಕೆ ಅನುಮಾನ ಬರುತ್ತೆ ಅನ್ನಿಸಿ ಸುಮ್ಮನಾದರು. ಹೋಗೋದಾದ್ರೆ ಕತ್ತಲು ಇಳಿದ ಮೇಲೆ ಹೋಗಬೇಕು ಅಂತ ಯೋಚಿಸುತ್ತಲೇ ತಿಮ್ಮರಾಯಿನ ಕರೆದರು. 'ಹೋಗು, ಇಷ್ಟೊತ್ತಿಗೆ ಮಸ್ತಾನಂದು ಊಟ ಆಗಿರಬೌದು. ಅರ್ಜೆಂಟ್ ಕೆಲಸ ಐತೆ ಅಂತ ಹೇಳಿ ಕರಕಂಡೇ ಬಾ' ಅಂದರು. ಅವನು ಅತ್ತ ಹೋದ ಮೇಲೆ ಮಸ್ತಾನ್ ಒಪ್ಪದಿದ್ದರೆ ಬೇರೆ ಯಾರನ್ನಾದರೂ ಒಪ್ಪಿಸಬೇಕು. ಬೆಳಕು ಹರಿಯೊದರೊಳಗೆ ಎಲ್ಲವೂ ಮುಗಿಯಬೇಕು ಅಂತ ಅಂದುಕೊಂಡರು.

ತಿಮ್ಮರಾಯಿ, ಮಸ್ತಾನ್ ಮನೆ ಹತ್ರ ಹೋದಾಗ ಅವನ ಹೆಂಡತಿ ಹರಕಲು ಸೀರೆ, ಬಟ್ಟೆಗಳನ್ನು ಗುಡ್ಡೆ ಹಾಕಿಕೊಂಡು ಕೌದಿ ಹೊಲಿಯುತ್ತ ಕೂತಿದ್ದಳು. ತಿಮ್ಮರಾಯಿ ಮುಖ ನೋಡುತ್ತಲೇ, 'ಯಜಮಾನರಿಗೆ ಹುಷಾರಿಲ್ಲ. ಜ್ವರ ಬಂದವೆ... ಮಲಗಿದ್ದಾರೆ. ಎದ್ದ ಮೇಲೆ ನೀನು ಬಂದಿದ್ದನ್ನು ಹೇಳ್ತೀನಿ' ಅಂತ ಅವನ ಮುಖ ನೋಡದೆ ಹೇಳಿ ಕೌದಿ ಹೊಲಿಯುವುದನ್ನು ಮುಂದುವರಿಸಿದಳು.

★★★

ನಾಳೆ ನಲ್ಲಿ ನೀರು ಸಪ್ಲೆ ಇರಲ್ಲ ಅಂತ ಪಂಚಾಯ್ತಿ ಜವಾನ ಡಂಗೂರ ಸಾರಿಕೊಂಡು ಹೋದ ಬೆನ್ನಿಗೇ ಊರು ಎಚ್ಚೆತ್ತುಕೊಂಡಿತು. ದನಕರುಗಳಿಗೆ ಅಂತ ಊರ ಹೆಂಗಸರು ಮತ್ತು ಸಂಬಳದಾಳುಗಳು ಪ್ಲಾಸ್ಟಿಕ್ ಕೊಡಗಳನ್ನು ಎತ್ತಿಕೊಂಡು ಊರ ಬಾಗಿಲಲ್ಲಿರುವ ಉಪ್ಪುನೀರಿನ ಏಕೈಕ ಬೋರ್‌ಬಾವಿಯತ್ತ ದೌಡಾಯಿಸಿದರು. ಎಷ್ಟು ಸಾಧ್ಯವೊ ಅಷ್ಟೂ ನೀರನ್ನು ಒಯ್ಯುವುದು ಅವರ ಉದ್ದೇಶವಾಗಿತ್ತು. ಪಂಚಾಯ್ತಿಯವರು ಡಂಗೂರ ಹೊಡೆದಾಗಲೆಲ್ಲ ಹೀಗೇ ಆಗುತ್ತಿತ್ತು. ಒಂದು ಕೊಡದಷ್ಟು ನೀರೆತ್ತಲು ಹತ್ತಾರು ಸಲ ಕೈಪಂಪು ಹೊಡೆಯಬೇಕಿತ್ತು. ಗಂಡಸರೇ ಸುಸ್ತಾಗಿ ಬಿಡುತ್ತಿದ್ದರು. ಹೆಂಗಸರು ಪ್ರತಿ ಸಲ ಪಂಪು ಆಡಿಸುವಾಗಲೂ ಪಿಡಿಒ, ಚೇರ್ಮನ್ನರ ಹೆಸರೆತ್ತದೆ ತಮ್ಮ ದುರದೃಷ್ಟವನ್ನು ನಿಂದಿಸುವ ನೆಪದಲ್ಲಿ ಇಬ್ಬರಿಗೂ ಶಾಪ ಹಾಕುತ್ತಿದ್ದರು. ತಮ್ಮನ್ನು ಈ ಊರಿಗೆ ಮದುವೆ ಮಾಡಿಕೊಟ್ಟ ಅವರ ಅಪ್ಪ, ಅಣ್ಣಂದಿರನ್ನು ಬೈದುಕೊಂಡು ಹಳಹಳಿಸುತ್ತಿದ್ದರು.

ಸರ್ಕಾರ ಜೀತದಾಳು ಪದ್ಧತಿಯನ್ನು ನಿಷೇಧಿಸಿ ಐವತ್ತು ವರ್ಷಗಳೇ ಕಳೆದಿವೆ. ಆದರೆ, ಈಗ ಸಂಬಳದಾಳಿನ ಹೆಸರಿನಲ್ಲಿ ಊರಲ್ಲಿ ಜೀತಗಾರಿಕೆ ಮುಂದುವರಿದಿತ್ತು. ಬೋರ್‌ಬಾವಿ ಹತ್ರ ಬಂದಾಗಲೆಲ್ಲ ಕೆಲವು ಸಂಬಳದಾಳುಗಳು ಈ ವರ್ಷ ಹೇಗಾದರೂ ಮಾಡಿ ಸಾಲ ತೀರಿಸಿ ಈ ಕಷ್ಟ ತಪ್ಪಿಸಿಕೊಳ್ಳುವುದಾಗಿ ಬಹಿರಂಗವಾಗಿ ಹೇಳುತ್ತಿದ್ದರು.

ಕೆರೆಗೆ ಹೆಣಗಳು ಬಿದ್ದು ತೇಲುತ್ತಿರುವ ವಿಷಯವನ್ನು ಯಾರಿಗೂ ಹೇಳಲಾಗದೆ ಬೆಳಗಿನಿಂದ ಒಳಗೊಳಗೇ ಚಡಪಡಿಸುತ್ತಿದ್ದ ಯಂಕಟಿ ಕೊನೆಗೂ ಬಾಯಿ ಬಿಟ್ಟ!

'ನೀನು ಯಾರಿಗೂ ಹೇಳಲ್ಲ ಅಂದ್ರೆ ಒಂದು ವಿಷ್ಯ ಹೇಳ್ತೀನಿ...' ಅನ್ನುತ್ತ ವಿರುಪಣ್ಣ ಶೆಟ್ಟರ ಮನೆಯಲ್ಲಿ ಸಂಬಳಕ್ಕಿದ್ದ ಕೊಮಾರಯ್ಯನಿಂದ ಅಂಗೈ ಭಾಷೆ ಹಾಕಿಸಿಕೊಂಡು, 'ಮೋಟರು ಕೆಟ್ಟಿದೆ ಅನ್ನದು ಸುಳ್ಳು... ಯಾರೋ ತಾಯಿ ಮಗಳು ದೇವರಕೆರೆಗೆ ಬಿದ್ದು ಸತ್ತಿದಾರಂತೆ... ಚೇರ್ಮನ್ನರ ಆಳುಮಗ ತಿಮ್ಮರಾಯಿ ನಂಗೆ ಬೆಳಿಗ್ಗೇನೆ ಹೇಳಿದ. ಇದನ್ನು ನಿಂಗಷ್ಟೇ ಹೇಳ್ತ ಇದೀನಿ. ನೀನು ಯಾರಿಗೂ ಹೇಳಬೇಡ' ಅಂತ ಅಂದುಬಿಟ್ಟ! ಯಂಕಟಿ ಅತ್ತ ಹೋಗುತ್ತಿದ್ದಂತೆ ಕೊಮಾರಯ್ಯ ಅವನು ಹೇಳಿದ್ದ ಗುಟ್ಟನ್ನು ಆಣೆ ಹಾಕಿಸಿಕೊಂಡು ಬೋರಿನತ್ರ ಇದ್ದವರಿಗೆಲ್ಲ ಹೇಳಿ ಬಿಟ್ಟ. ಕೆಲವೇ ನಿಮಿಷಗಳಲ್ಲಿ ಕೆರೆಯಲ್ಲಿ ಹೆಣಗಳು ತೇಲುತ್ತಿರುವ ಸುದ್ದಿ ಊರ ತುಂಬಾ ಬಿತ್ತರವಾಯಿತು.

ಕೆರೆಯಲ್ಲಿ ಹೆಣಗಳು ಬಿದ್ದಿರೋದು ನಿಜವೊ, ಸುಳ್ಳೊ ಅನ್ನೋದನ್ನ ಖುದ್ದು ನೋಡಿ, ಖಚಿತಪಡಿಸಿಕೊಳ್ಳಲು ಕೆಲವರು ನಿಂತಲ್ಲೇ ನಿರ್ಧರಿಸಿ ಬಿಟ್ಟರು. ಮಾಡುತ್ತಿದ್ದ ಕೆಲಸ ಬಿಟ್ಟು ಲುಂಗಿಯನ್ನೂ ಸುತ್ತಿಕೊಳ್ಳದೆ ಚೆಡ್ಡಿ ಬನೀನಿನಲ್ಲೇ ಕೆರೆಯ ದಾರಿ ಹಿಡಿದರು. ಮೊದಲ ಗುಂಪು